**ಎಂ.ವಿ.ಸಿ.ನಂಬರ್ಃ 17/2022** **ಪಿಡಬ್ಲ್ಯುಃ 1**

**<u>ದಿಃ21.10.2022 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ</u>** ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಅಂಶಗಳನ್ನು ತಾನೇ ಹೇಳಿ ಬರೆಸಿರುವುದಾಗಿ ಮತ್ತು ಸತ್ಯವಾಗಿದೆ ಎಂದು ನುಡಿದಿದ್ದಾರೆ.

ನಾನು ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯವರು ನ್ಯಾಯಾಲಯಕ್ಕೆ ಸಲ್ಲಿಸಿರುವಂತ ಅಂತಿಮ ವರದಿ ಮತ್ತು ಇತರೆ ದಾಖಲೆಗಳ ದೃಢೀಕೃತ ನಕಲಗಳನ್ನು ನಿಪಿ 1 ಎಂದು, ಅರ್ಜಿದಾರರಿಗೆ ಸಂಬಂಧಿಸಿದಂತೆ ಯೂನಿಟಿ ಆಸ್ಪತ್ರೆಯವರು ನೀಡಿರುವ ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ನಿಪಿ 2 ಎಂದು, ಅರ್ಜಿದಾರರಿಗೆ ಸಂಬಂಧಿಸಿದಂತೆ ಯೂನಿಟಿ ಆಸ್ಪತ್ರೆಯವರು ನೀಡಿರುವ ಡಿಸ್ಚಾರ್ಜ್ ಸಮ್ಮರಿಯ ದೃಢೀಕೃತ ನಕಲನ್ನು ನಿಪಿ 3 ಎಂದು, ಅರ್ಜಿದಾರರಿಗೆ ಸಂಬಂಧಿಸಿದಂತೆ ಯೂನಿಟಿ ಆಸ್ಪತ್ರೆಯವರು ನೀಡಿರುವ ಡಿಸ್ಚಾರ್ಜ್ ಬಿಲ್ ನ ದೃಢೀಕೃತ ನಕಲನ್ನು ನಿಪಿ 4 ಎಂದು,

ಅರ್ಜಿದಾರರಿಗೆ ಸಂಬಂಧಿಸಿದಂತೆ ವೆನ್ಲಾಕ್ ಆಸ್ಪತ್ರೆಯವರು ನೀಡಿರುವ ಡಿಸ್ಚಾರ್ಜ್ ಕಾರ್ಡ್ ನ ದೃಢೀಕೃತ ನಕಲನ್ನು ನಿಪಿ 5 ಎಂದು, ಅರ್ಜಿದಾರರಿಗೆ ಸಂಬಂಧಿಸಿದಂತೆ ಎ ಜೆ ಆಸ್ಪತ್ರೆಯವರು ನೀಡಿರುವ ಮೆಡಿಕಲ್ ಬಿಲ್ಲುಗಳನ್ನು ನಿಪಿ 6 ರಿಂದ 16 ಎಂದು, ಅರ್ಜಿದಾರರಿಗೆ ಸಂಬಂಧಿಸಿದಂತೆ ಯುನಿಟಿ ಆಸ್ಪತ್ರೆಯವರು ನೀಡಿರುವ ಮೆಡಿಕಲ್ ಬಿಲ್ಲುಗಳನ್ನು ನಿಪಿ17 ರಿಂದ 30 ಎಂದು, ಅರ್ಜಿದಾರರಿಗೆ ಸಂಬಂಧಿಸಿದಂತೆ ವೆನ್ಲಾಕ್ ಆಸ್ಪತ್ರೆಯವರು ನೀಡಿರುವ ಮೆಡಿಕಲ್ ಬಿಲ್ಲುಗಳನ್ನು ನಿಪಿ 31 ಮತ್ತು 32 ಎಂದು, ಎ ಜೆ ಆಸ್ಪತ್ರೆಗೆ ಸಂಬಂಧಿಸಿದ ವೈದ್ಯಕೀಯ ಸಲಹಾ ಚೀಟಿಯನ್ನು ನಿಪಿ 33 ಎಂದು, ಅರ್ಜಿದಾರರಿಗೆ ಸಂಬಂಧಿಸಿದಂತೆ ವೆನ್ಲಾಕ್ ಆಸ್ಪತ್ರೆಯವರು ನೀಡಿರುವ ಮೆಡಿಕಲ್ ಬಿಲ್ಲನ್ನು ನಿಪಿ 34 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ ವಕೀಲರಿಂದಃ**

1. ನಾನು ಕತ್ತಲೆಕಾಡುವಿನಲ್ಲಿರುವ ವಿಷ್ಣು ತೋಟದಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಸದರಿ ತೋಟದ ಖಾಯಂ ಕೆಲಸಗಾರನಲ್ಲ. ಸದರಿ ತೋಟದಲ್ಲಿ ನನಗೆ ದಿನಕ್ಕೆ 370 ರೂ. ಸಂಬಳ ಸಿಗುತ್ತದೆ. ತಿಂಗಳ ಪೂರ್ತಿ ನನಗೆ ಕೆಲಸ ಸಿಗುವುದಿಲ್ಲ ಎಂದರೆ ಸಾಕ್ಷಿ ತಿಂಗಳಿಗೆ 4 ದಿನ ಮಾತ್ರ ರಜೆ ಕೊಡುತ್ತಾರೆ ಎಂದು ನುಡಿಯುತ್ತಾರೆ.

2. ಅಪಘಾತವಾಗುವ ಸಮಯದಲ್ಲಿ ನಾನು ಮಾರುತಿ ವ್ಯಾನ್ ನಲ್ಲಿ ಪ್ರಯಾಣಿಸುತ್ತಿದ್ದೆನು ಎಂದರೆ ಸರಿ. ಲಾರಿ ಮಾರುತಿ ವ್ಯಾನ್ ನ ಮುಂದುಗಡೆ ಹೋಗುತ್ತಿತ್ತು ಎಂದರೆ ಸರಿ. ಅಪಘಾತ ನಾನು ಪ್ರಯಾಣಿಸುತ್ತಿದ್ದಂತಹ ಮಾರುತಿ ವ್ಯಾನ್ ನ ಚಾಲಕ ತಪ್ಪಿನಿಂದ ಆಗಿರುತ್ತದೆ ಎಂದರೆ ಸುಳ್ಳು. ನಾನು ಪ್ರಯಾಣಿಸುತ್ತಿದ್ದಂತಹ ಮಾರುತಿ ವ್ಯಾನ್ ಲಾರಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸುಳ್ಳು. ನಾನು ಪ್ರಯಾಣಿಸುತ್ತಿದ್ದಂತಹ ಮಾರುತಿ ವ್ಯಾನ್ ಚಾಲಕನು ಲಾರಿಯ ನಡುವೆ ಸಾಕಷ್ಟು ಅಂತರವನ್ನು ಬಿಡದೆ ಚಾಲನೆ ಮಾಡಿಕೊಂಡು ಹೋಗುತ್ತಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸುಳ್ಳು. ಅಪಘಾತದಿಂದ ಆದಂತಹ ಗಾಯಗಳು ಈಗ ಗುಣವಾಗಿರುತ್ತದೆ ಎಂದರೆ ಸುಳ್ಳು, ಸಾಕ್ಷಿಯು ಮುಂದುವರಿದು ನೋವು ಇದೆ ಎಂದು ನುಡಿಯುತ್ತಾರೆ. ನಾನು ಈಗ ಚಿಕಿತ್ಸೆ ಪಡೆದುಕೊಳ್ಳುತ್ತಿಲ್ಲ ಎಂದರೆ ಸಾಕ್ಷಿಯು ಮಾತ್ರೆ ತೆಗೆದುಕೊಳ್ಳುತ್ತಿದ್ದೇನೆ ಎಂದು ನುಡಿಯುತ್ತಾರೆ.

3. ದಿಃ28.08.2017 ರಂದು ನಾನು ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತೇನೆ ಎಂದರೆ ಸರಿ. ನಂತರದಲ್ಲಿ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ ಎಂದರೆ ಸುಳ್ಳು. ನಾನು ಕೊನೆಯ ಬಾರಿ ಈ ವರ್ಷ ಕಳೆದ ತಿಂಗಳು ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಕಳೆದ ತಿಂಗಳು ಆಸ್ಪತ್ರೆಗೆ ಹೋದ ಬಗ್ಗೆ ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರಿದು, ಆಸ್ಪತ್ರೆಯಲ್ಲಿ ಗೇಟ್ ಪಾಸ್ ಮಾತ್ರ ಕೊಡುತ್ತಾರೆ ಎಂದು ನುಡಿಯುತ್ತಾರೆ. ಗಾಯ ಚೆನ್ನಾಗಿ ಗುಣವಾಗಿರುತ್ತದೆ, ಆದಕಾರಣ ನಾನು ಯಾವುದೆ ಚಿಕಿತ್ಸೆಯನ್ನು ಪಡೆಯುತ್ತಿರುವುದಿಲ್ಲ ಎಂದರೆ ಸುಳ್ಳು. ನಾನು ಮೊದಲಿನ ಹಾಗೆ ಈಗ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದರೆ ಸಾಕ್ಷಿ ಅಷ್ಟು ಕೆಲಸ ಮಾಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ವೈದ್ಯರು ನನಗೆ ಕೆಲಸ ಮಾಡಬಾರದು ಎಂದು ತಿಳಿಸಿರುವುದಿಲ್ಲ ಎಂದರೆ ಸಾಕ್ಷಿ ಹೆಚ್ಚು ಭಾರದ ಕೆಲಸವನ್ನು ಮಾಡಬಾರದು, ಸಣ್ಣಪುಟ್ಟ ಕೆಲಸ ಮಾಡಬಹುದು ಎಂದು ನುಡಿಯುತ್ತಾರೆ. ನಾನು ಅರ್ಜಿಯಲ್ಲಿ ಕೇಳಿರುವಷ್ಟು ಪರಿಹಾರಕ್ಕೆ ಅರ್ಹನಾಗಿರುವುದಿಲ್ಲ ಎಂದರೆ ಸುಳ್ಳು. ನಾನು ಪರಿಹಾರವನ್ನು ಕೋರುವ ಸಲುವಾಗಿ ಸುಳ್ಳು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ.ಇದೆ.

ಸಹಿ/-
(ಶ್ರೀಮತಿ ಎನ್ ಬಿ ಜಯಲಕ್ಷ್ಮಿ )
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.